# ವಿಶ್ವನಂದಿನಿ ಲೇಖನಮಾಲೆ – 272

## ಶ್ರೀ ಲಕ್ಷ್ಮೀವಲ್ಲಭತೀರ್ಥರ ವೃಂದಾವನಶಿಲಾ

ಶ್ರೀಮದ್ ವ್ಯಾಸರಾಜಸಂಸ್ಥಾನದ ಸಂಪ್ರದಾಯಪ್ರವರ್ತಕರಾದ ಶ್ರೀ ರಾಮಚಂದ್ರತೀರ್ಥಗುರುಸಾರ್ವಭೌಮರ ಸಾಕ್ಷಾತ್ ಶಿಷ್ಯರು ಶ್ರೀ ಲಕ್ಷ್ಮೀವಲ್ಲಭತೀರ್ಥ ಶ್ರೀಪಾದಂಗಳವರು.

**ಶ್ರೀಮಧ್ವಭಾಷ್ಯಾಣಿ ಜಯಾರ್ಯಟೀಕಾಃ**
**ಶ್ರೀ ವ್ಯಾಸತೀರ್ಥಾರ್ಯನಿಬಂಧನಾನಿ।**
**ಶ್ರೀರಾಮಚಂದ್ರಾರ್ಯಕೃತಪ್ರಬಂಧಾಃ**
**ಕುರ್ವಂತು ಸರ್ವೇ ಮಮ ಸುಪ್ರಭಾತಮ್ ।।**

ಶ್ರೀಮದಾಚಾರ್ಯರ ಭಾಷ್ಯಗಳು. ಟೀಕಾಕೃತ್ಪಾದರ ಟೀಕಾಗ್ರಂಥಗಳು, ಚಂದ್ರಿಕಾಚಾರ್ಯರ ಗ್ರಂಥಗಳು, ಶ್ರೀ ರಾಮಚಂದ್ರತೀರ್ಥರ ಟಿಪ್ಪಣಿಗಳು ನಮಗೆ ಸುಪ್ರಭಾತವನ್ನುಂಟು ಮಾಡಲಿ ಎಂಬ ಅದ್ಭುತ ಅನುಸಂಧಾನವನ್ನು ಹೇಳಿಕೊಟ್ಟ ಮಹಾಗುರುಗಳವರು.

ಇವರು ರಚನೆ ಮಾಡಿರುವ ಆ ಅತ್ಯಪೂರ್ವ ಸ್ತೋತ್ರದ — ಪ್ರಭಾತಪಂಚಕದ — ಅರ್ಥಾನುಸಂಧಾನದ ಉಪನ್ಯಾಸಗಳನ್ನು ಮಾಡಿ ನಿಮಗೆಲ್ಲ ನೀಡಿದ್ದೇನೆ.

Link — http://vishwanandini.com/topicsInfo.php?id=25&page=U

ಇವರು ವೃಂದಾವನಸ್ಥರಾದದ್ದು ಬೇಲೂರಿನಲ್ಲಿ. ಶ್ರೀ ವಿದ್ಯಾಶ್ರೀನಿವಾಸತೀರ್ಥಶ್ರೀಪಾದಂಗಳವರು ತಮ್ಮ ಶಿಷ್ಯರಾದ ಶ್ರೀ ವಿದ್ಯಾಸಮುದ್ರತೀರ್ಥ ಶ್ರೀಪಾದಂಗಳವರ ಜೊತೆಯಲ್ಲಿ ಬೇಲೂರಿನಲ್ಲಿ ಚಾತುರ್ಮಾಸ್ಯಮಾಡಿದ್ದರ ಉಲ್ಲೇಖವನ್ನು ಇತಿಹಾಸದಲ್ಲಿ ಕಾಣುತ್ತೇವೆ.

ಬೇಲೂರಿನ ಮೂಲವೃಂದಾವನವಿದ್ದ ಪ್ರದೇಶಕ್ಕೆ ಕೆಲವು ದುಷ್ಕರ್ಮಿಗಳಿಂದ ಸಮಸ್ಯೆಗಳು ಉಂಟಾಗಲು ಆರಂಭಿಸಿದಾಗ  ಶ್ರೀ ವಿದ್ಯಾಪಯೋನಿಧಿತೀರ್ಥರು  ಅಲ್ಲಿನ ವೃಂದಾವನವನ್ನು ಸಮಗ್ರ ಕಳಾಕರ್ಷಣ ಮಾಡಿಸಿ, ವೃಂದಾವನದ ಪ್ರದೇಶದಲ್ಲಿ ಸುಮಾರು ಹತ್ತು

ಅಡಿಗಳಷ್ಟು ಆಳವನ್ನು ಅಗೆಯಿಸಿ ಅಲ್ಲಿದ್ದ ಪ್ರತಿಯೊಂದು ಮಣ್ಣಿನಕಣವನ್ನೂ ಬಿಡದೇ ತಿರುಮಕೂಡಲಿಗೆ ತಂದು, ಸಮಗ್ರ ವೃಂದಾವನದ ಕಲ್ಲುಗಳ ಸಮೇತವಾಗಿ ಭೂಮಿಯಲ್ಲಿಟ್ಟು ಅದರ ಮೇಲೆ ಮತ್ತೊಂದು ಬೃಂದಾವನ ನಿರ್ಮಾಣ ಮಾಡಿಸಿ ಅಲ್ಲಿ ಪ್ರತಿಷ್ಠಾಪನೆ ಮಾಡಿದರು.

ಆಗ ತಂದಿದ್ದ ಸಮಗ್ರ ವೃಂದಾವನದ ಶಿಲೆಗಳಲ್ಲಿ ಮೇಲ್ಭಾಗದ ಒಂದು ಭಾಗದ ಶಿಲೆಯನ್ನು ಮಾತ್ರ ಪ್ರತ್ಯೇಕವಾಗಿ ಭಕ್ತರ ದರ್ಶನಕ್ಕಾಗಿ ಇಡಿಸಿದ್ದರು. ಅದರ ಮೇಲೆ ಶ್ರೀ ಲಕ್ಷ್ಮೀವಲ್ಲಭಸ್ವಾಮಿಗಳು ಎಂದು ಬರೆಹವನ್ನೂ ಬರೆಸಿದ್ದರು.
ಶ್ರೀ ವಿದ್ಯಾಪಯೋನಿಧಿತೀರ್ಥರು ಕಾಲವಾದ ನಂತರ ಒಂದೆರಡು ದಶಕಗಳ ವ್ಯಾಸರಾಜಮಠದ ಪರಿಸ್ಥಿತಿ ಎಲ್ಲರಿಗೂ ತಿಳಿದದ್ದೆ.

ಶ್ರೀ ಲಕ್ಷ್ಮೀವಲ್ಲಭತೀರ್ಥರ ವೃಂದಾವನದ ಶಿಲೆ ಶ್ರೀ ವ್ಯಾಸರಾಜಪುರದಲ್ಲಿನ ಶ್ರೀ ಕನಕದಾಸಾರ್ಯರ ಗುಡಿಯ ಮುಂದೆಯೇ ಬಿದ್ದಿತ್ತು.

ಕಳೆದ ವರ್ಷ ಅಂದರೆ 2017 ರ ಅಕ್ಟೋಬರಿನಲ್ಲಿಯೇ ಅದರ ಕುರಿತು ಮಠದವರಿಗೆ ಸ್ಪಷ್ಟವಾಗಿ ತಿಳಿದಿದ್ದರೂ ಆ ಶಿಲೆಯ ಕುರಿತು ಯಾವ ವ್ಯವಸ್ಥೆಯನ್ನೂ ಮಾಡಿರಲಿಲ್ಲ.

ಈ ವರ್ಷ 19-07-2018 ರಂದು  ಶ್ರೀ ಶೇಷಚಂದ್ರಿಕಾಚಾರ್ಯರ ದರ್ಶನಕ್ಕಾಗಿ ಬಂದಿದ್ದ ಭಕ್ತರೊಬ್ಬರು ಶ್ರೀ ವ್ಯಾಸರಾಜಪುರಕ್ಕೆ ಭೇಟಿ ನೀಡಿದ್ದಾರೆ. ಆ ಶಿಲೆಯ ಸಮೀಪದಲ್ಲಿ ಹೆಂಡದ ಬಾಟಲಿ ಮತ್ತು ಚಪ್ಪಲಿಗಳು ಬಿದ್ದದ್ದನ್ನು ಕಂಡು ಅವರಿಗೆ ಅತೀವ ವ್ಯಥೆಯಾಗಿದೆ. ತಕ್ಷಣದಲ್ಲಿ ನನಗೆ ಫೋನ್ ಮಾಡಿದ್ದಾರೆ. ನಾನು ಆಗ ತಿರುಪತಿಗೆ ಸೇವೆಗಾಗಿ ತೆರಳಿದ್ದೆ. ಮಾಡಿ ತುಂಬ ದುಃಖದಿಂದ ಈ ವಿಷಯವನ್ನು ತಿಳಿಸಿದರು.

ವೃಂದಾವನಗಳಿಗೆ, ಪ್ರತಿಮೆಗಳಿಗೆ ಪೂಜಾರ್ಹ ವಸ್ತುಗಳಿಗೆ ಅಪವಿತ್ರ ವಸ್ತುಗಳ ಸಂಪರ್ಕವಾದಾಗ ಶಾಸ್ತ್ರ ಅನೇಕ ರೀತಿಯ ಶುದ್ಧಿಗಳನ್ನು ತಿಳಿಸುತ್ತದೆ. ನಿಶ್ಚಲ ಪ್ರತಿಮೆಗಳಿಗೆ ಒಂದು ರೀತಿ, ದೇವಸ್ಥಾನಗಳಿಗೊಂದು ರೀತಿ ಹೀಗೆಲ್ಲ ಕ್ರಮಗಳಿವೆ.

ಇರುವ ವೃಂದಾವನಗಳಿಗೇ ಸರಿಯಾಗಿ ಆರಾಧನೆ ಮಾಡುವ ಜನ ಮಠದಲ್ಲಿ ಇಲ್ಲದೇ ಇದ್ದಾಗ, ಆರಾಧನೆಯ ದಿವಸ ಮೂಲವೃಂದಾವನದ ಸಮೀಪವೇ ಇದ್ದರೂ ದರ್ಶನಕ್ಕೂ ಬಾರದ ಮಹಾನುಭಾವರು ನಮ್ಮ ಪೀಠದಲ್ಲಿದ್ದಾಗ ಯಾರಿಗೆ ನಮ್ಮ ಸಮಸ್ಯೆ ಹೇಳುವದು.

ಈಗಿರುವ ಮಠದ ಅಪಾರದರ್ಶಕವಾದ ಆಡಳಿತದ ವ್ಯವಸ್ಥೆಯಲ್ಲಿ ನನಗೆ ಎಳ್ಳಷ್ಟೂ ನಂಬಿಕೆಯಿಲ್ಲ ಎನ್ನುವದು ಎಲ್ಲರಿಗೂ ತಿಳಿದ ವಿಷಯ.

ಹೀಗಾಗಿ ಶ್ರೀ ವ್ಯಾಸರಾಜಮಠದ ಶಿಷ್ಯನಾಗಿ ನಾನೇ ಖುದ್ದಾಗಿ ನಿರ್ಧಾರ ತೆಗೆದುಕೊಂಡೆ.

ಆ ಶಿಲೆಗೆ ಮೊದಲು ಜಲಾಧಿವಾಸವಾಗಬೇಕು. ಶುದ್ಧವಾದ ನೀರಿನಲ್ಲಿಡಬೇಕು.

ಪಾತ್ರೆಯಲ್ಲಿ ಮುಳುಗಿಸಿಟ್ಟರೆ ನಿತ್ಯವೂ ನೀರನ್ನು ತೆಗೆಯಬೇಕು. ಆ ರೀತಿ ಮಾಡಲು ನಾನೇ ಊರಿನಲ್ಲಿಲ್ಲ.

ಇನ್ನು ಭಾವಿಗಳಲ್ಲಿಡಬಹುದು. ಆದರೆ ಮೊದಲಿಗೆ ಬಾವಿಗಳೇ ಇಲ್ಲ, ಇದ್ದರೂ ಕನಿಷ್ಠ ಮೂರು ಜನ ಕೂಡಿ ಹಿಡಿಯಬೇಕಾದ ಶಿಲೆಯನ್ನು ಬಾವಿಯಲ್ಲಿ ಮುಳುಗಿಸಿ ತೆಗೆಯಲು ಸಾಧ್ಯವಿಲ್ಲ. ನದಿಯಲ್ಲಿಟ್ಟರೆ ಮತ್ತೆ ಸಿಗುತ್ತದೆ ಎನ್ನುವ ಭರವಸೆಯಿಲ್ಲ.

ಹೀಗಾಗಿ ನನ್ನ ಮನೆಯ ಮುಂದೆ ಇರುವ ಸರೋವರದಲ್ಲಿ ಇಡುವದು ಎಂದು ನಿರ್ಧರಿಸಿದೆ.

ಶ್ರೀ ತಿರುಪತಿಯ ಬೆಟ್ಟವನ್ನು ಹತ್ತುತ್ತಲೇ ನನ್ನ ಪರಿಚಯದ ಶ್ರೀ ಮಠದ ಶ್ರದ್ಧಾವಂತ ಶಿಷ್ಯರಿಗೆ ವಿಷಯ ತಿಳಿಸಿದೆ. ತಕ್ಷಣದಲ್ಲಿ ಹೊರಟು ಆ ಶಿಲೆಯನ್ನು ಶುದ್ಧವಾಗಿ ತಂದು ನನ್ನ ಮನೆಯ ಮುಂದಿನ ಸರೋವರದಲ್ಲಿರಿಸುವಂತೆ ಹೇಳಿದೆ. ಶ್ರೀಮದ್ ವ್ಯಾಸರಾಜಸಂಸ್ಥಾನದಲ್ಲಿ ಅಪಾರ ಭಕ್ತಿ ಇರುವ ಆ ಶಿಷ್ಯರು ತಕ್ಷಣ ಕಾರನಲ್ಲಿ ಹೊರಟರು. ಅವರು ಹೋದಾಗ ಅಲ್ಲಿ ಯಾರೂ ಇರಲಿಲ್ಲ. ಸಂಜೆ ಸುಮಾರು ಏಳುಗಂಟೆಯ ಸಮಯ. ವೃಂದಾವನದ ಶಿಲೆಯನ್ನು ಮುಟ್ಟಬೇಕು ಎಂದು ಬೆಳಗಿನಿಂದ ಉಪವಾಸವಿದ್ದಾರೆ. ಕಾಯುವಷ್ಟು ಸಮಯವಿಲ್ಲ. ಮತ್ತೆ ಅವರೆಲ್ಲ ಹಿಂತಿರುಗಬೇಕು.

ಹೀಗಾಗಿ ಆ ಶಿಲೆಯನ್ನು ಅಲ್ಲಿಂದ ಮನೆಗೆ ತಂದು ಸರೋವರದಲ್ಲಿಳಿಸಿ ಹೊರಟರು.

ಹೀಗೆ ಆಷಾಢ ಶುದ್ಧ ಸಪ್ತಮೀ ಗುರುವಾರದ ದಿವಸ ಆ ಶಿಲೆಯನ್ನು ಜಲಾಧಿವಾಸದಲ್ಲಿಡಲಾಯಿತು.

ಬಳಿಕ, ನಾನು ತಿರುಪತಿಯ ಸೇವೆಯನ್ನು ಮುಗಿಸಿಕೊಂಡು ಹಿಂತಿರುಗಿದೆ. ಸರಿಯಾಗಿ ಒಂದು ತಿಂಗಳ ನಂತರ ಶ್ರಾವಣ ಶುದ್ಧ ಸಪ್ತಮೀ ಶ್ರೀ ಲಕ್ಷ್ಮೀಕಾಂತತೀರ್ಥಗುರುಸಾರ್ವಭೌಮರ ಆರಾಧನೆಯ ದಿವಸ ಈ ಶಿಲೆಗೆ ವಿಶೇಷ ಪೂಜೆಯನ್ನೂ ಸಲ್ಲಿಸಿದೆ.

ಆದಾದ ನಂತರ ಈ ಶಿಲೆಯನ್ನು ಎಲ್ಲಿಡಬೇಕು ಎಂದು ಆಲೋಚಿಸಿದೆ.

ನಿತ್ಯವೂ ಪೂಜೆಯಾಗಬೇಕು. ಶ್ರೀ ಲಕ್ಷ್ಮೀವಲ್ಲಭತೀರ್ಥರಿಗೆ ಯಾರು ಭಕ್ತಿಯಿಂದ ಪೂಜೆ ಮಾಡುತ್ತಾರೆಯೋ ಅಲ್ಲಿ ಅದನ್ನಿರಿಸಬೇಕು, ಹೀಗೆ ಆಲೋಚನೆ ಮಾಡುತ್ತಲೇ ಇದ್ದೆ.

ಅವರನ್ನು ಪೂಜೆ ಮಾಡುವ ಪೂರ್ಣ ಅಧಿಕಾರ, ಭಕ್ತಿ ಶ್ರದ್ಧೆಗಳು ಎಲ್ಲವೂ ಸಂಪೂರ್ಣವಾಗಿ ಇರುವದು ಅವರ ಸಾಕ್ಷಾತ್ ಶಿಷ್ಯರಾದ ಶ್ರೀ ಲಕ್ಷ್ಮೀನಾಥತೀರ್ಥರಿಗೆ. ಶ್ರೀರಂಗದಲ್ಲಿರುವ ಅವರ ವೃಂದಾವನದ ಮೇಲ್ಭಾಗದಲ್ಲಿ ಈ ಶಿಲೆಯನ್ನಿರಿಸಿದರೆ ಇಬ್ಬರೂ ಗುರೂತ್ತಮರು ಪ್ರೀತರಾಗುತ್ತಾರೆ ಎಂದು ಲಕ್ಷ್ಮೀನಾಥತೀರ್ಥರ ಆರಾಧನೆಯ ದಿವಸ ಸಾಯಂಕಾಲ ಮನಸ್ಸಿಗೆ ತೋರಿತು. ಗುರುಗಳೇ ತೋರಿದ ದಾರಿ ಎಂದು ನಿರ್ಧರಿಸಿ ಮಾರನೆಯ ದಿವಸ ಶ್ರೀರಂಗಕ್ಕೆ ಹೊರಟೆ.

ನನ್ನ ಕಾರಿನ ಹಿಂಭಾಗದ Trunk ಅನ್ನು ಗಂಜಲದಿಂದ ಪೂರ್ಣವಾಗಿ ಪ್ರೋಕ್ಷಿಸಿ, ಅದರ ಮೇಲೆ ಹೊಸದಾದ ಪಂಚೆಯೊಂದನ್ನು ಹಾಸಿ ಅದರ ಮೇಲೆ ಶಿಲೆಯನ್ನಿಟ್ಟು, ಶಿಲೆಯನ್ನು ಧಾವಳಿಯಿಂದ ಮುಚ್ಚಿ ಶ್ರೀರಂಗಕ್ಕೆ ಹೊರಟೆ.

ಶಿಲೆಗೆ ಯಾವ ರೀತಿಯ ತೊಂದರೆಯೂ ಆಗಬಾರದು ಎಂದು ತುಂಬ ನಿಧಾನಗತಿಯಲ್ಲಿ ಕಾರನ್ನು ನಡೆಸುತ್ತ ಹೊರಟವನು ಶ್ರೀರಂಗದ

ಶ್ರೀಮದ್ ವ್ಯಾಸರಾಜ ಮಠವನ್ನು ಮುಟ್ಟಿದಾಗ ರಾತ್ರಿ 10 ದಾಟಿತ್ತು. ಅಲ್ಲಿನ ಸಿಬ್ಬಂದಿಗೆ ಮೊದಲೇ ತಿಳಿಸಿದ್ದೆ. ಹೀಗಾಗಿ ಎಲ್ಲರೂ ಭಕ್ತಿಯಿಂದ ಕಾಯುತ್ತಿದ್ದರು. ನಾನೂ ಸಹ ಇಳಿದು, ಶುದ್ಧನಾಗಿ, ಮಡಿಪಂಚೆಯನ್ನುಟ್ಟು ಶ್ರೀ ಲಕ್ಷ್ಮೀವಲ್ಲಭತೀರ್ಥರ ಶಿಲೆಯನ್ನು ತೆಗೆದುಕೊಂಡು ಶ್ರೀ ಲಕ್ಷ್ಮೀನಾಥತೀರ್ಥರ ವೃಂದಾವನದ ಮುಂಭಾಗದಲ್ಲಿಟ್ಟು ನಮಸ್ಕಾರ ಮಾಡಿ ಸಮರ್ಪಿಸಿದೆ.

ನನ್ನ ಅಪೇಕ್ಷೆ ಇದ್ದದ್ದು ಅದನ್ನು ಶ್ರೀ ಲಕ್ಷ್ಮೀನಾಥತೀರ್ಥರ ವೃಂದಾವನದ ಮೇಲ್ಭಾಗದಲ್ಲಿಡಬೇಕು ಎಂದು. ಆದರೆ, ಶ್ರೀ ಲಕ್ಷ್ಮೀನಾಥತೀರ್ಥರ ವೃಂದಾವನಕ್ಕೂ ಮೇಲಿನ ಕಲ್ಲಿನ ಚಾವಣಿಗೂ ಅಂತರ ಸುಮಾರು ಒಂದು ಅಡಿಯಷ್ಟೇ. ಹೀಗಾಗಿ ಇದನ್ನು ಇಡಲು ಸಾಧ್ಯವಿಲ್ಲ.

ಆಗ ಅಲ್ಲಿನವರು ಇದನ್ನು ಶ್ರೀ ಲಕ್ಷ್ಮೀನಿಧಿತೀರ್ಥಶ್ರೀಪಾದಂಗಳವರ ವೃಂದಾವನದ ಮೇಲಿಟ್ಟರೆ ಸಕಲರಿಗೂ ದರ್ಶನದ

ಭಾಗ್ಯ ದೊರೆಯುತ್ತದೆ. (ಒಳಗಿನ ವೃಂದಾವನಗಳ ಮೇಲಿಟ್ಟರೆ ಎಲ್ಲರಿಗೂ ಕಾಣಿಸುವದು ಕಷ್ಟ) ಹೀಗಾಗಿ ಅಲ್ಲಿಡುವದು ಸೂಕ್ತ ಎಂದು ಸೂಚಿಸಿದರು. ನನಗೂ ಸಹ ಸರಿಯೆನಿಸಿತು.

ಮಾರನೆಯ ದಿವಸ ಪ್ರಾತಃಕಾಲದಲ್ಲಿಯೇ ಆ ಮಠದ ಶ್ರದ್ಧಾವಂತ ಸಿಬ್ಬಂದಿಗಳು ಮತ್ತು ಅಲ್ಲಿನ ಅನೇಕ ಸದ್ಭಕ್ತರು ಪಾರಾಯಣಪುರಸ್ಸರವಾಗಿ ಆ ಶಿಲೆಯನ್ನು ಎತ್ತಿ ತಂದು ಶ್ರೀ ಲಕ್ಷ್ಮೀನಿಧಿತೀರ್ಥ ಶ್ರೀಪಾಂದಗಳಂವರ ವೃಂದಾವನದ ಮೇಲಿರಿಸಿದರು.

ಏಕಾದಶಿಯಂದು ಹರಿವಾಣಸೇವೆಯನ್ನು ಮಾಡಬೇಕಾದರೆ ದೇವರ ನಿರ್ಮಾಲ್ಯದ ಹರಿವಾಣವನ್ನು ಎರಡೂ ಕೈಯಲ್ಲಿ ಹಿಡಿದು ನಾವು ತಲೆಯ ಮೇಲಿಟ್ಟುಕೊಳ್ಳುವಂತೆ ಶ್ರೀ ಲಕ್ಷ್ಮೀನಿಧಿತೀರ್ಥಶ್ರೀಪಾದಂಗಳವರು ತಮ್ಮ ಶಿರಸ್ಸಿನ ಮೇಲೆ ಶ್ರೀ ಲಕ್ಷ್ಮೀವಲ್ಲಭತೀರ್ಥರನ್ನು ಭಕ್ತಿಯಿಂದ ಧರಿಸಿದಂತಿದೆ.



ಶ್ರೀ ಲಕ್ಷ್ಮೀವಲ್ಲಭತೀರ್ಥ ಗುರುಸಾರ್ವಭೌಮರ
ವೃಂದಾವನದ ಶಿಲೆ

ಶ್ರೀರಂಗಕ್ಷೇತ್ರದಸಲ್ಲಿರುವ
ಶ್ರೀ ಲಕ್ಷ್ಮೀನಿಧಿತೀರ್ಥಶ್ರೀಪಾದಂಗಳವರ ವೃಂದಾವನದ
ಮೇಲೆ ವಿರಾಜಮಾನವಾಗಿರುವ ದೃಶ್ಯ

ಶ್ರೀ ಲಕ್ಷ್ಮೀವಲ್ಲಭತೀರ್ಥರ ವೃಂದಾವನ ನಿರ್ಮಾಣವಾಗಿರುವದು 1643 ರಲ್ಲಿ. ಮಾಡಿಸಿದ್ದು ಶ್ರೀ ಲಕ್ಷ್ಮೀನಾಥತೀರ್ಥರು. ಅದಾದ ನೂರು

ವರ್ಷಗಳ ನಂತರ ಶ್ರೀ ಲಕ್ಷ್ಮೀನಿಧಿತೀರ್ಥರ ವೃಂದಾವನವಾಗಿರುವದು.

ಆ ವೃಂದಾವನದ ಕಳಾಕರ್ಷಣೆಯಾಗಿರುವದು ಪಯೋನಿಧಿಸ್ವಾಮಿಗಳ ಕಾಲಕ್ಕೆ. ಪ್ರಾಯಃ 1980 ರ ಹಿಂದೆ ಮುಂದೆ.

ಅವರು ವೃಂದಾವನದ ಸಮಗ್ರ ಅವಶೇಷಗಳನ್ನೂ ಭೂಮಿಯಲ್ಲಿ ಹುದುಗಿಸಿ ಇದೊಂದನ್ನು ಮಾತ್ರ ಇರಿಸಿದ್ದಾರೆ.

ಆದರೆ ಆ ಶಿಲೆ ಲಕ್ಷ್ಮೀನಿಧಿತೀರ್ಥರ ವೃಂದಾವನದ ಮೇಲ್ಭಾಗಕ್ಕೆ ಹೇಳಿ ಮಾಡಿಸಿದಂತಿದೆ.

ಭಗವದಿಚ್ಛೆ ಅಂದರೆ ಇದೇ ಅಲ್ಲವೇ.

ಶ್ರೀರಂಗದಲ್ಲಿನ ಅರ್ಚಕರೂ ಸಹ ಭಕ್ತಿ ಗೌರವಗಳಿಂದ ಇದರ ಪೂಜಾಕ್ರಮವನ್ನು ಕೇಳಿಕೊಂಡು ಆಚರಿಸುತ್ತಿದ್ದಾರೆ. ಮೊದಲಿಗೆ ಲಕ್ಷ್ಮೀವಲ್ಲಭರಿಗೆ ಅಭಿಷೇಕ, ಗಂಧ, ಅಕ್ಷತೆ, ಹಸ್ತೋದಕ, ಮಂಗಳಾರತಿ, ನಂತರ ಶ್ರೀ ಲಕ್ಷ್ಮೀನಾಥತೀರ್ಥರೇ ಮೊದಲಾದ ಮೂಲ

ವೃಂದಾವನಗಳಿದೆ. ಈ ಕ್ರಮದಲ್ಲಿ ನಿತ್ಯವೂ ಗೋಪೀಚಂದನ, ಅಕ್ಷತೆಗಳಿಂದ ಅಲಂಕಾರ ಮಾಡುತ್ತಿದ್ದಾರೆ. ತಮ್ಮ ಸಾಕ್ಷಾತ್ ಶಿಷ್ಯರಾದ ಶ್ರೀ ಲಕ್ಷ್ಮನಾಥತೀರ್ಥರು, ಅವರ ಶಿಷ್ಯರಾದ ಶ್ರೀ ಲಕ್ಷ್ಮೀಪತಿ ತೀರ್ಥರು, ಬಳಿಕ ಶ್ರೀ ಲಕ್ಷ್ಮೀನಿಧಿತೀರ್ಥರು, ಶ್ರೀ ವಿದ್ಯಾಶ್ರೀಧರ ತೀರ್ಥರು ಮತ್ತು ಶ್ರೀ ವಿದ್ಯಾವಾರಿಧಿತೀರ್ಥರು ಹೀಗೆ ತಮ್ಮ ಪರಂಪರೆಯ ಐದು ಜನ ಶಿಷ್ಯಯತಿಗಳಿಂದ ಪೂಜೆಯನ್ನು ಸ್ವೀಕರಿಸುತ್ತ ಶ್ರೀ ಲಕ್ಷ್ಮೀವಲ್ಲಭತೀರ್ಥರು ಶ್ರೀರಂಗದಲ್ಲಿ ವಿರಾಜಮಾನರಾಗಿದ್ದಾರೆ.

ಆ ಮಹಾಗುರುಗಳ ಅನುಗ್ರಹ ನಮ್ಮೆಲ್ಲರ ಮೇಲಿರಲಿ ಎಂದು ಭಕ್ತಿಪೂರ್ವಕವಾಗಿ ಪ್ರಾರ್ಥಿಸಿ ಸಮಗ್ರ ಜೀವದ ಭಕ್ತಿಯಿಂದ ಅವರಿಗೆ ಸಾಷ್ಟಾಂಗ ಪ್ರಣಿಪಾತಗಳನ್ನು ಸಲ್ಲಿಸುತ್ತೇನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ